## ೧೧-೧೬ ವಯೋಮಾನದ ವಿದ್ಯಾರ್ಥಿಗಳಿಗೆ ರೇಬಿಸ್ ಶಿಕ್ಷಣ ಪಠ್ಯ ಮಾಹಿತಿ :

ಈ ವಿಭಾಗದಲ್ಲಿ ಮುಖ್ಯವಾಗಿ (೧೧ ರಿಂದ ೧೬ ವರ್ಷಗಳು) ವಿದಾರ್ಥಿಗಳು ಭಾಗವಹಿಸುತ್ತಾರೆ.

### ರೇಬಿಸ್ ಶಿಕ್ಷಣದ ಮಹತ್ವ :

ರೇಬಿಸ್ ಕಾಯಿಲೆಯ ಬಗ್ಗೆ ಸಮಗ್ರ ಮಾಹಿತಿ ಹಾಗು ರೇಬಿಸ್ ನಿರ್ಮೂಲನೆಗಳಿಸುವ ಬಗ್ಗೆ ಸೂಕ್ತ ಮಾಹಿತಿ ನೀಡಲಾಗುವುದು, ಅಲ್ಲದೇ ರೇಬಿಸ್ ತಡೆಗಟ್ಟುವುದರಿಂದ ವರ್ಷವಾರು ಸಂಭವಿಸುವ ಸಾವುಗಳ ಬಗ್ಗೆ ಮಾಹಿತಿ ನೀಡಿ ಮುಂದಿನ ದಿನಗಳಲ್ಲಿ ರೇಬಿಸ್ ಮುಕ್ತಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸುವರು. ಈ ಕಲಿಕೆಯ ನಂತರ ಮಕ್ಕಳು ಪ್ರಭಾವಿತರಾಗಿ ಪೋಷಕರು, ನೆರೆಹೊರೆಯವರು ಹಾಗು ಬಂಧುಗಳಿಗೆ ರೇಬಿಸ್ ರೋಗದ ಭೀಕರತೆ ಬಗ್ಗೆ ಮನದಟ್ಟು ಮಾಡುವರು.

### ರೇಬಿಸ್ ಶಿಕ್ಷಣದ ನಂತರ ವಿದ್ಯಾರ್ಥಿಗಳಲ್ಲಿ ಕಂಡುಬರುವ ಪರಿಣಾಮ ಮತ್ತು ಪ್ರಭಾವ:

ಈ ಶಿಕ್ಷಣದ ಅಂತ್ಯದಲ್ಲಿ ವಿದ್ಯಾರ್ಥಿಗಳು ರೇಬಿಸ್‌ನ ಭೀಕರತೆ ಚೀನಾದ ಉದಾಹರಣೆ ಸಮತ, ಅಲ್ಲದೇ ರೇಬಿಸ್‌ನ ದೂರವಿರಿಸುವುದು, ರೇಬಿಸ್ ನಾಯಿಗಳನ್ನ ಗುರುತಿಸುವುದು, ಕಚ್ಚುವ ನಾಯಿಯಿಂದ ತಪ್ಪಿಸಿಕೊಳ್ಳುವುದು ಹಾಗು ರೇಬಿಸ್ನ ಸಂಪೂರ್ಣ ನಿರ್ಮೂಲನೆ ಬಗ್ಗೆ ಮಾಹಿತಿ ನೀಡಲಾಗುವುದು.

### ರೇಬಿಸ್ ಶಿಕ್ಷಣ ಕಲಿತ ಬಗ್ಗೆ ದಾಖಲೆ ಅಥವಾ ರುಜುವಾತು:

ರೇಬಿಸ್ ಶಿಕ್ಷಣದಲ್ಲಿ ಕಲಿಕೆಯ ಮೊದಲು ಹಾಗು ಕಲಿಕೆ ನಂತರದಲ್ಲಿ ವಿದ್ಯಾರ್ಥಿಗಳಿಗೆ ಹಲವು ಪ್ರಶ್ನೆಗಳನ್ನು ಕೇಳುವ ಮುಖಾಂತರ ವಿದ್ಯಾರ್ಥಿಗಳ ಬುದ್ಧಿಮಟ್ಟವನ್ನು ಪರೀಕ್ಷಸಲಾಗುವುದು, ಅಲ್ಲದೇ ಈ ಕಲಿಕೆಯ ಮುಖಾಂತರ ನಾಯಿ ಕಚ್ಚಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗುವುದು ಹಾಗು ರೇಬಿಸ್ ಲಸಿಕೆ ಹಾಕಿದ ನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು ಕೂಡ ಗಮನಿಸಲಾಗುಚವುದು.

### ರೇಬಿಸ್ ಶಿಕ್ಷಣದ ವ್ಯಾಕ್ಯಾನ :

ಇದರಲ್ಲಿ ವಿದ್ಯಾರ್ಥಿಗಳು ರೇಬಿಸ್ ಹಾಗು ರೇಬಿಸ್ ರೋಗ ತಡೆಗಟ್ಟುವ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುವರು.

### ರೇಬಿಸ್ ಶಿಕ್ಷಣಕ್ಕೆ ಬೇಕಾದ ಅವಶ್ಯಕ ಸಾಮಗ್ರಿ ಹಾಗು ಸಲಕರಣೆಗಳು :

೧) ಕ್ಲಾಸ್ ರೂಂ
೨) ಕಂಪ್ಯೂಟರ್
೩) ಸ್ಕ್ರೀನ್
೪) ಪವರ್ ಪಾಯಿಂಟ್ ಪ್ರಜೆಂಟೇಶನ್
೫) ಪೇಪರ್
೬) ಪೋಸ್ಟರ್
೭) ಬಣ್ಣದ ಸಾಮಗ್ರಿ ಮುಂತಾದವುಗಳನ್ನು ಒದಗಿಸಲಾಗುವುದು.